International Journal of Kannada Research
www.kannadajournal.com

**ISSN: 2454–5813**
IJKR 2024; 10(2): 17-22
© 2024 IJKR
www.kannadajournal.com
Received: 25-01-2024
Accepted: 28-02-2024

**ಡಾ. ಪ್ರೇಮಾ ಸಿದ್ಧರಾಜು**
ಪ್ರಾಂಶುಪಾಲರು, ಎಸ್. ಜೆ. ಆರ್. ಮಹಿಳಾ ಕಾಲೇಜು, ರಾಜಾಜಿನಗರ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಪ್ರೇಮಾ ಸಿದ್ಧರಾಜು**
ಪ್ರಾಂಶುಪಾಲರು, ಎಸ್. ಜೆ. ಆರ್. ಮಹಿಳಾ ಕಾಲೇಜು, ರಾಜಾಜಿನಗರ, ಬೆಂಗಳೂರು, ಕರ್ನಾಟಕ, ಭಾರತ

# ಕುವೆಂಪುರವರ ಊರ್ಮಿಳೆ

**ಡಾ. ಪ್ರೇಮಾ ಸಿದ್ಧರಾಜು**

**ಪೀಠಿಕೆ**

ಮಹಾಕಾವ್ಯದಲ್ಲಿ ಬರುವ ಮುಖ್ಯ ಪಾತ್ರಗಳು ಸಮಸ್ತ ಕಾವ್ಯದ ವ್ಯಾಪ್ತಿಯನ್ನು ಆಕ್ರಮಿಸಿಕೊಳ್ಳುವುದರಿಂದ ಕವಿ ಹಾಗೂ ಸಹೃದಯನ ಗೌರವ ಗಮನಗಳನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತವೆ. ಇಡೀ ಕಾವ್ಯದ ಮಹತ್ತಿಗೆ ಕಾರಣರಾದ ನಾಯಕ ನಾಯಕಿಯರ ಸರ್ವಾಂಗೀಣ ಅಭ್ಯುದಯ, ಹಿರಿಮೆ, ಗರಿಮೆಗಳಿಗೆ ಮೌನವಾಗಿ ಶ್ರಮಿಸಿ ತಮ್ಮ ಅಂತಃಸತ್ವವನ್ನೇ ತ್ಯಾಗಗೈದ ಕೆಲವು ಕಿರು ಪಾತ್ರಗಳು ಮಹಾಕಾವ್ಯದಲ್ಲಿ ಕವಿ ಹಾಗೂ ಸಹೃದಯರ ಸ್ಮರಣೆಯಿಂದ ಸಹಜವಾಗಿ ಗೌಣವಾಗಿ ಬಿಡುತ್ತವೆ. ಹಾಗಾಗಿ ಕಿರು ಪಾತ್ರಗಳ ಅಜ್ಞಾತ ದುಡಿಮೆ ಸಮರ್ಪಣ ಭಾವವಗಳು ಇಲ್ಲದಿದ್ದರೆ ಪ್ರಮುಖ ಪಾತ್ರಗಳು ಜನ ಮಾನಸದಲ್ಲಿ ಇಂದಿಗೂ ಉಳಿದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಹಿರಿಮೆಗೆ ಹೆಸರಾದ ಕಿರು ಪಾತ್ರಗಳಲ್ಲಿ ಊರ್ಮಿಳೆಯೂ ಒಬ್ಬಳು.

ಕುವೆಂಪುರವರ "ಶ್ರೀರಾಮಾಯಣದರ್ಶನಂ" ಮಹಾಕಾವ್ಯವು ವಾಲ್ಮೀಕಿಯ ರಾಮಾಯಣದಿಂದ ಅನೇಕಾನೇಕ ರೀತಿಯಾಗಿ ಸ್ಫೂರ್ತಿ ಪಡೆದು ನೂರಾರು ಸನ್ನಿವೇಶಗಳು ಹಾಗೂ ಪಾತ್ರಗಳೊಂದಿಗೆ ಹೆಣೆಯಲ್ಪಟ್ಟಿರುವುದರ ಜೊತೆಗೆ ಕೆಲವು ಸಂಗತಿಗಳ ವಿಚಾರದಲ್ಲಿ ಸಮುಚಿತ ನ್ಯಾಯವನ್ನು ಒದಗಿಸಿಕೊಟ್ಟಿದೆ. ಅಂತಹ ಪಾತ್ರಗಳಲ್ಲಿ ಊರ್ಮಿಳೆಯ ಪಾತ್ರವೂ ಒಂದು. "ಶ್ರೀಮದ್ರಾಮಾಯಣದಲ್ಲಿ ಕೇವಲ ನಾಮ ಶಕ್ತಿಯಾಗಿ ಉಳಿದಿದ್ದ ಊರ್ಮಿಳೆ ಕುವೆಂಪುರವರ ರಾಮಾಯಾಣದರ್ಶನಂ ಮಹಾಕಾವ್ಯದಲ್ಲಿ ಕಾವ್ಯ ಶಕ್ತಿಯಾಗಿ, ತ್ಯಾಗ ಶಕ್ತಿಯಾಗಿ, ಚಿತ್ತ ಶಕ್ತಿಯಾಗಿ ಚಿತ್ರಿತಳಾಗಿದ್ದಾಳೆ." ಎಂದು ದೇ.ಜವರೇಗೌಡರು ಅಭಿಪ್ರಾಯಿಸಿರುವುದು ಸೂಕ್ತವೆನಿಸುತ್ತದೆ. ಅದರಂತೆ ಮೂಲ ರಾಮಾಯಣದಲ್ಲಿ ಊರ್ಮಿಳೆಗಾಗಿರುವ ಅನ್ಯಾಯದ ಬಗ್ಗೆ "ಕಾವ್ಯದ ಅನಾದರ – ಪ್ರಾಚೀನ ಸಾಹಿತ್ಯ" (ಅನುವಾದ:– ಟಿ. ಎಸ್. ವೆಂಕಣ್ಣಯ್ಯ) ಕೃತಿಯಲ್ಲಿ ರವೀಂದ್ರನಾಥ ಟ್ಯಾಗೋರರು ಎತ್ತಿರುವ ಕೆಲವು ನ್ಯಾಯಯುಕ್ತ ಪ್ರಶ್ನೆಗಳಿಗೆ ಕುವೆಂಪುರವರ ಶ್ರೀರಾಮಾಯಣದರ್ಶನಂ ಸಮಂಜಸವಾದ ಉತ್ತರವನ್ನು ಊರ್ಮಿಳೆಯ ಪಾತ್ರದ ಮೂಲಕ ಎತ್ತಿ ತೋರಿಸುಬಲ್ಲದು.

ಇಡೀ ಮಹಾಕಾವ್ಯದಲ್ಲಿ ರಾಮನಿಗೆ ಸರಿಸಮಾನವಾಗಿ ಚಿತ್ರಿಸಲ್ಪಡುವ ಲಕ್ಷ್ಮಣನ ಸಹಧರ್ಮಿಣಿಯಾದ ಊರ್ಮಿಳೆಯ ಹೆಸರು ಎರಡು ಭಾರಿ ಮಾತ್ರ ಹೇಳಲ್ಪಡುವುದು. ಪಾತ್ರ ವಿಶ್ಲೇಷಣೆ ಮಾಡುವಾಗ ಸಹಜವಾಗಿಯೇ ಆಶ್ಚರ್ಯವೆನಿಸುತ್ತದೆ. ವಾಲ್ಮೀಕಿಯ ಚಿತ್ತ ರಾಮನತ್ತವಾದರೂ ಸೀತೆ ಕಾವ್ಯದ ತುಂಬಾ ಆವರಿಸುವಾಗ ಲಕ್ಷ್ಮಣನ ಮಡದಿಗೆ ಕೆಲವು ಅವಕಾಶವಾದರೂ ಬೇಕಲ್ಲವೇ? ಎನಿಸದೆ ಇರಲಾರದು. ಮಹಾಕವಿ ಕುವೆಂಪು ಈ ಸೂಕ್ಷ್ಮತೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಲು ಮನಸ್ಸು ಮಾಡಿರುವುದು ಬಹುಶಃ ಕವಿ ಹೃದಯದ ಸೂಕ್ಷ್ಮತನವನ್ನು ತೋರುತ್ತದೆ. ಊರ್ಮಿಳೆಯನ್ನು ವಾಲ್ಮೀಕಿ ನೋಡುವುದು ಈ ಕೆಳಕಂಡಂತಿದೆ:–

ಮಹಾಕವಿ ವಾಲ್ಮೀಕಿಯು ತನ್ನೆಲ್ಲಾ ಕಲ್ಪನಾ ಶಕ್ತಿಯನ್ನು ರಾಮ ಸೀತೆಯರಿಗಾಗಿಯೇ ವಿನಿಯೋಗಿಸಿರುವುದು ಸಂಪೂರ್ಣ ರಾಮಾಯಣವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡುಬರುತ್ತದೆ. ಇದೇ ಕಾವ್ಯದಲ್ಲಿ ಓದುಗರು ಮೊದಲ ಬಾರಿಗೆ ಊರ್ಮಿಳೆಯ ಹೆಸರನ್ನು ಗಮನಿಸುವುದು ಮದುವೆಯ ಮಂಟಪದಲ್ಲಿ. ರಾಮನು ಶಿವ ಧನಸ್ಸನ್ನು ಮುರಿದ ನಂತರ ದಶರಥನು ತನ್ನ ಕುಲಗುರುವಾದ ವಸಿಷ್ಠ ಮಹರ್ಷಿಗಳೊಂದಿಗೆ ಪರಿವಾರ ಸಮೇತನಾಗಿ ಮಿಥಿಲೆಗೆ ಬರುತ್ತಾನೆ. ಅಂದಿನ ಕಾಲದ ಪದ್ಧತಿಯಂತೆ ವಸಿಷ್ಠರು ದಶರಥ ಮಹಾರಾಜನ ವಂಶದ ಕುರಿತು ವಿವರಣೆಯನ್ನು ನೀಡಿ, ಜನಕನ ಇಬ್ಬರು ಕುಮಾರಿಯರಲ್ಲಿ ಸೀತೆಯನ್ನು ರಾಮನಿಗೆ, ಊರ್ಮಿಳೆಯನ್ನು ಲಕ್ಷ್ಮಣನಿಗೆ ವಿವಾಹ ಮಾಡಿಸುತ್ತಾರೆ. ಇದಾದ ತರುವಾಯ ರಾಮ ಸೀತೆಯರ ಪ್ರೇಮಾನುರಾಗಗಳನ್ನ ಮಾತ್ರ ವರ್ಣಿಸುವತ್ತ ತನ್ನ ಮನಸ್ಸನ್ನು ಕವಿ ವಾಲ್ಮೀಕಿಯು ಕೇಂದ್ರೀಕರಿಸಿದ್ದಾರೆಯೇ ಹೊರತು, ಊರ್ಮಿಳೆಯನ್ನಾಗಲಿ, ಭರತ – ಶತ್ರುಘ್ನ ಹಾಗೂ ಅವರ ಪತ್ನಿಯರ ಕುರಿತಾಗಿ ಕನಿಷ್ಠವೂ ಯೋಚಿಸದೆ ಇದ್ದಿದ್ದರಿಂದ ಅವರು ತೀರ ಹಿನ್ನೆಲೆಗೆ ಸರಿದು ಬಿಡುತ್ತಾರೆ. ಇಲ್ಲಿಂದಲೇ ಊರ್ಮಿಳೆಯ ಬದುಕಿನ ಮೌನ ಯಾನ ಆರಂಭವಾಗುತ್ತದೆ ಎನ್ನಬಹುದು.

ಊರ್ಮಿಳೆಯನ್ನೆ ಓದುಗರು ಗಮನದಲ್ಲಿಟ್ಟುಕೊಂಡು ಮೂಲ ರಾಮಾಯಣವನ್ನ ಸಂಪೂರ್ಣವಾಗಿ ಅವಲೋಕಿಸಿದಾಗ ಕೆಲವು ಪ್ರಶ್ನೆಗಳು ಹುಟ್ಟಿಕೊಳ್ಳುವುದು ಸಹಜ. ರಾಮನ ಪಟ್ಟಾಭಿಷೇಕ ಕಾರ್ಯ ಸಂಪನ್ನಗೊಂಡ ನಂತರ ಅಯೋಧ್ಯೆಯಲ್ಲಿ ಶಾಂತಿಯ ವಾತಾವರಣವೇ ಇಲ್ಲದಂತಾಗುತ್ತದೆ. ಸೀತೆ ರಾಮನೊಂದಿಗೆ ವನವಾಸಕ್ಕೆ ಹೊರಟು ನಿಂತ ಸಂದರ್ಭದಲ್ಲಿ ಆಕೆ "ನಾನು ನಿನ್ನೊಡನೆ ಬಂದೇ ಬರುತ್ತೇನೆ. ಕುಲಕ್ಕೆ ಕೆಟ್ಟ ಹೆಸರನ್ನು ತರಬಾರದೆಂಬ ಇನ್ನೊಬ್ಬ ಸ್ತ್ರೀಯಾದರೂ ಹೀಗೆ ಮಾಡುವವಳು ಎನ್ನುತ್ತಾಳೆ. ಈ ಸಂದರ್ಭದಲ್ಲಿ ಆಕೆಗೆ ತನ್ನ ಪ್ರೀತಿಯ ತಂಗಿ ಊರ್ಮಿಳೆಯ ನೆನಪೇ ಆಗಲಿಲ್ಲವೇ? ಗಂಡನ ಜೊತೆಗೆ ಸದಾಕಾಲ ಇರುವುದರಿಂದಲೋ ಸಹಧರ್ಮ ಚಾರಿತ್ರ್ಯವೂ, ಪಾತಿವ್ರತ್ಯವೂ ಪ್ರಕಟವಾಗುವುದೆಂದಾದರೆ ಊರ್ಮಿಳೆಯ ಹದಿನಾಲ್ಕು ವರ್ಷಗಳ ಅಪೂರ್ವ ತಪಸ್ಸಿಗೆ ಬೆಲೆ ಇಲ್ಲವೆಂದಾದಿತು ಅಲ್ಲವೇ? ಲಕ್ಷ್ಮಣ ತಾನೂ ರಾಮನೊಡನೆ ಕಾಡಿಗೆ ಬರಲು ಅನುಮತಿಸಬೇಕೆಂದು ಪ್ರಾರ್ಥಿಸಿದಾಗ ಉದಾರ ಹೃದಯನಾದ ರಾಮ, ಕೌಸಲ್ಯೆ ಸುಮಿತ್ರೆಯರನ್ನು ನೋಡಿಕೊಳ್ಳುವುದಕ್ಕಾಗಿ ಆತ ಅಯೋಧ್ಯೆಯಲ್ಲಿಯೇ ಇರಬೇಕೆಂದು ಹೇಳುತ್ತಾನೆಯೇ ವಿನಃ ಊರ್ಮಿಳೆಯ ಹೆಸರೆತ್ತುವುದಿಲ್ಲ! ಲಕ್ಷ್ಮಣ ಹಠ ಹಿಡಿದಾಗ ಮಾತ್ರ ತಮ್ಮನ ಮಾತಿಗೆ ಸಮ್ಮತಿಸಿ ಆಪ್ತರೆಲ್ಲರಿಗೂ ಈ ವಿಷಯವನ್ನು ತಿಳಿಸಿ ಅವರ ಅನುಮತಿಯನ್ನು ಪಡೆದು ಬಾ ಎಂದು ಹೇಳುತ್ತಾನೆ. ಈ ಆಪ್ತರು (ಸುಹೃಜ್ಜನಮ್) ಎಂಬ ಪದದ ವ್ಯಾಪ್ತಿಯಲ್ಲಿ ನಾವು ಊರ್ಮಿಳೆಯನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ಲಕ್ಷ್ಮಣ ತನ್ನ ಆಪ್ತರಾದವರೆಲ್ಲರ ಅನುಮತಿಯನ್ನು ಪಡೆದು ಬರುತ್ತಾನೆ. (ಸುಹೃಜ್ಜನಮಾಮಂತ್ರ್ಯ) ಇಲ್ಲಿಗೆ ಮುಗಿದು ಹೋಗುತ್ತದೆ. ಊರ್ಮಿಳೆಯ ನೆನಪು ಸೀತಾರಾಮರ ವನವಾಸಾಗಮನದ ಸಂದರ್ಭದಲ್ಲಿ ತಾಯಿ ತಂದೆಯರ, ನಾಗರಿಕರ ಶೋಕವನ್ನು ನೂರಾರು ಶ್ಲೋಕಗಳಲ್ಲಿ ಸರ್ಗಗಟ್ಟಲೆ ವರ್ಣಿಸುವ ಋಷಿ ವಾಲ್ಮೀಕಿ ಒಂದೇ ಒಂದು ಶ್ಲೋಕವನ್ನಾದರೂ ಊರ್ಮಿಳೆಗೆ ಆಕೆಯ ಮನೋವೇದನೆಯ ಚಿತ್ರಣಕ್ಕೆ ಮೀಸಲಿರಿಸಿದಷ್ಟು ಕೃಪಣತೆಯನ್ನು ಏಕೆ ಪ್ರದರ್ಶಿಸಿದನೆಂಬುದಕ್ಕೆ ಸಮುಚಿತ ಸಮರ್ಥನೆ ನಮಗೆ ದೊರೆಯುವುದಿಲ್ಲ. ಇಷ್ಟೇ ಅಲ್ಲ, ಇಲ್ಲಿಂದ ಕಾವ್ಯಾಂತ್ಯದವರೆಗೂ ಎಲ್ಲಿಯೂ ಊರ್ಮಿಳೆಯ ಪ್ರಸ್ತಾಪವೇ ಇಲ್ಲ. ತನ್ನ ಮಡದಿಯೊಂದಿಗೆ ಅಡವಿಯ ಸುಂದರ ತಾಣದಲ್ಲಿ ವಿಹರಿಸುವ ಭ್ರಾತೃವತ್ಸಲನಾದ ಶ್ರೀರಾಮ ತನ್ನಂಥ ಸುಖದಿಂದ ವಂಚಿತನಾಗಿರುವ ತನ್ನ ತಮ್ಮನ ಬಗ್ಗೆ

ಆಲೋಚಿಸಲಿಲ್ಲವೇ? ಆ ಹದಿನಾಲ್ಕು ವರ್ಷಗಳ ಸುದೀರ್ಘ ಅವಧಿಯಲ್ಲಿ ಒಮ್ಮೆಯಾದರೂ ಲಕ್ಷ್ಮಣನಿಗೆ ಮಡದಿಯ ನೆನಪು ಆಗಲಿಲ್ಲವೇ? ಸೀತೆಯಾದರೂ ತನ್ನ ಪ್ರಿಯ ಸೋದರಿಯನ್ನು ಎಂದೂ ನೆನೆಯದಷ್ಟು ಕೃತಘ್ನಳಾದಳೇ? ಅಯೋಧ್ಯೆಯಿಂದ ಅವರು ನಿರ್ಗಮಿಸುವಾಗ, ಅಯೋಧ್ಯೆಗೆ ಅವರು ಆಗಮಿಸುವಾಗ ದಶರಥನ ಅಂತಃಪುರದ ಸ್ತ್ರೀಯರೆಲ್ಲ ಬಂದರು ಎಂದು ಕವಿ ಹೇಳುತ್ತಾನೆಯೇ ಹೊರತು, ಎಲ್ಲೂ ಪ್ರತ್ಯೇಕವಾಗಿ ಲಕ್ಷ್ಮಣ ಸತಿಯನ್ನು ಹೆಸರಿಸುವುದಿಲ್ಲ. ಶ್ರೀ ರಾಮನೊಡನೆ ಪಟ್ಟಾಭಿಷೇಕಕ್ಕಾಗಿ ಸೀತೆಯನ್ನು ಸಿಂಗರಿಸುವಾಗ ಕೂಡ ಊರ್ಮಿಳೆಯಿರಲಿಲ್ಲವೇ? ತನ್ನೆಲ್ಲ ನೋವು ವಿರಹ ಸಂಕಷ್ಟಗಳನ್ನು ನುಂಗಿಕೊಂಡು, ಸುಖ ಸಂತೋಷಗಳನ್ನು ತ್ಯಾಗ ಮಾಡಿ ರಾಮ ಸೀತೆಯರ ಸೇವೆಗೆ ತನ್ನ ಪ್ರಾಣ ಪತಿಯನ್ನು ಮುಡುಪು ಮಾಡಿದ ಈ ಮಹಾತ್ಯಾಗ ಶೀಲೆಯನ್ನು ಎಲ್ಲಿಯಾದರೂ ಒಂದೇ ಒಂದು ಸಲವಾದರೂ ಯಾರೂ ನೆನಪು ಮಾಡಿಕೊಳ್ಳದಿರುವುದು ಅತ್ಯಂತ ಆಶ್ಚರ್ಯಕರವೂ, ವಿಷಾದನೀಯವೂ, ಕ್ರೌರ್ಯವೂ ಆಗಿದೆ ಎನಿಸುತ್ತದೆ. ಊರ್ಮಿಳೆಯ ಬಗ್ಗೆ ಕಾವ್ಯ ತಾಳಿರುವ ಮೌನ ಓದುಗರಲ್ಲಿ ಸಂವೇದನೆಯನ್ನು ಮೂಡಿಸುವಂಥದ್ದು.[೧]

ಈ ಹಿನ್ನೆಲೆಯಲ್ಲಿ ಹೇಳುವುದಾದರೆ ವಾಲ್ಮೀಕಿಯಿಂದ ವಂಚಿತವಾಗಿರುವ ಊರ್ಮಿಳೆಯ ಪಾತ್ರವು ಕುವೆಂಪುರವರ ಶ್ರೀರಾಮಾಯಣದರ್ಶನಂನಲ್ಲಿ ನ್ಯಾಯಯುತವಾದ ಸ್ಥಾನವನ್ನು ಪಡೆದುಕೊಂಡಿದೆ. ಇದನ್ನು ಆ ಕಾವ್ಯದ ಕೆಲವು ಸನ್ನಿವೇಶಗಳು ಹಾಗೂ ಘಟನೆಗಳ ಆಧಾರದ ಮೂಲಕ ಶೋಧಿಸಬಹುದಾಗಿದೆ. ಸೀತಾರಾಮರ ವಿವಾಹ ಪ್ರಸಂಗದಿಂದಲೇ ಚರ್ಚೆಯನ್ನು ಆರಂಭಿಸುವುದಾದರೆ, ರಾಮನ ವಿವಾಹದೊಂದಿಗೆ ಲಕ್ಷ್ಮಣ – ಊರ್ಮಿಳೆಯ ವಿವಾಹವೂ ನಡೆಯುತ್ತದೆಯಾದರೂ ಅದರ ವರ್ಣನೆಯನ್ನು ತೀರ ಮೊಟಕುಗೊಳಿಸಲಾಗಿದೆ. ಅಯೋಧ್ಯೆಯ ಶಾಂತ ಜೀವನದಲ್ಲಿ ಮಂಥರೆಯಿಂದ ಉಂಟಾದ ಪ್ರಮಾದಗಳ ಸಂದರ್ಭದಲ್ಲಿ ಎಲ್ಲರಂತೆ ಧ್ವನಿ ಎತ್ತಿದ ಊರ್ಮಿಳೆಯ ಸ್ವರ ಎಂದಿಗೂ ಯಾರಿಗೂ ಕೇಳಿಸಲೇ ಇಲ್ಲ. ಸೀತೆ ರಾಮನೊಡನೆ ಕಾಡಿಗೆ ಹೊರಡಲು ಸಿದ್ಧನಾದ. ಲಕ್ಷ್ಮಣ ತನ್ನ ಸಹಧರ್ಮಿಣಿಯ ಕುರಿತಾಗಿ ತೃಣ ಮಾತ್ರವೂ ಯೋಚಿಸದೆ, ಆಕೆಯೊಂದಿಗೆ ಸರಿಯಾಗಿ ಸಮಾಲೋಚನೆಯನ್ನೂ ಮಾಡದೆ ಇಂಥ ನಿರ್ಧಾರವನ್ನು ಪ್ರಕಟಿಸುವುದರ ಹಿಂದಿನ ಉದ್ದೇಶವೇನಾಗಿತ್ತು? ಎನ್ನುವಂಥ ಅನೇಕ ಪ್ರಶ್ನೆಗಳು ನಮ್ಮಲ್ಲಿ ಮೂಡುತ್ತವೆ. ಈ ಪ್ರಶ್ನೆಗಳಿಗೆ ಕವಿ ಕುವೆಂಪುರವರು ಒಂದೇ ಬಾರಿಗೆ ಉತ್ತರಿಸುವ ಪ್ರಯತ್ನವನ್ನು ಮಾಡದೆ ಹಂತ – ಹಂತವಾಗಿ ಸಂದರ್ಭಾನುಸಾರ ಲಕ್ಷ್ಮಣ – ಊರ್ಮಿಳೆಯರ ಬಾಂಧವ್ಯವನ್ನು ಎಳೆ – ಎಳೆಯಾಗಿ ಬಿಚ್ಚಿಡುತ್ತಾರೆ. ಇಡೀ ಸಂಚಿಕೆಗೆ **'ಊರ್ಮಿಳಾ'** ಎಂದು ಹೆಸರಿಸುವುದರೊಂದಿಗೆ ಆಕೆಗೆ ದಿವ್ಯ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುತ್ತಾರೆ.

"ನೀರವ ಧ್ಯಾನವಧೂ ಹೇ ಊರ್ಮಿಳಾದೇವಿ,
ಸೌಮಿತ್ರಿಯರ್ಧಾಂಗಿ, ಹೇಳು ನೀನೆಲ್ಲಿದ್ದೆ
ಕಡೆದ ಕಡಲೋಲಯೋಧ್ಯಾನಗರಿ ಮಸಗಿದಾ
ಕ್ರಾಂತಿ ದಿನದಂದು? ನಿನ್ನೆರ್ದೆಪೂವಿನಾ ವೇದೆ
ಜಗಳ್ದುವಿಲ್ಲವೆ ತುಳ್ಕಿ ನೇತ್ರ ಶತಪತ್ರದಿಂ?
ಪೆಣ್ತನಂ ತಾನೆ ನೀನಲ್ಲದೂರ್ಮಿಳೆಯಲ್ತು
ಪೆಣ್ಣೆಂಬ ತಪಕೆ ನೀಂ ನಿರುಪಮ ಪ್ರತಿಮೆಯೌ"[೨]

ಈ ಪದ್ಯಭಾಗವು ಊರ್ಮಿಳೆಯ ಸಂಪೂರ್ಣ ವ್ಯಕ್ತಿತ್ವದ ಗುಣವರ್ಣನೆಯನ್ನು ಮಾಡುತ್ತದೆ. ಇಷ್ಟೇ ಅಲ್ಲ, ತನ್ನ ಪತಿಯಿಂದ ದೂರವಿರುವುದು ಅಸಹನೀಯವೇ ಆಗಿದ್ದರೂ ತನ್ನಕ್ಕ ಸೀತೆ ಪತಿಯೊಡನಿದ್ದುಕೊಂಡು ಸತೀತ್ವದ ತೇಜಸ್ಸು, ವರ್ಚಸ್ಸುಗಳನ್ನು ಉಜ್ವಲಿಸಿಕೊಳ್ಳುವ ಸಂಕಲ್ಪ ಮಾಡಿದರೆ, ತಾನು ಪತಿಯಿಂದ ದೂರವಿದ್ದುಕೊಂಡು ಪತಿಯ ಭ್ರಾತೃಸೇವೆಗೆ ಅಕ್ಕ ಭಾವರ ಪವಿತ್ರೋದ್ದೇಶ ಸಾಧನೆಗೆ ಬೆಂಬಲ ಸೂಚಿಸುವ ಊರ್ಮಿಳೆ ನಿಜಕ್ಕೂ ಒಬ್ಬ ತಪಸ್ವಿನಿ.

ಇನ್ನೂ ತನ್ನ ಜೀವಮಾನದ ಸಾರವತ್ತಾದ ಭಾಗವನ್ನೆಲ್ಲ ತಪೋನಿರತಳಾಗಿ ತಮ್ಮ ರಕ್ಷಣೆಗೆಂದೇ ಪತಿಯನ್ನು ಕಳುಹಿಸಿಕೊಟ್ಟ ತ್ಯಾಗಶೀಲೆ ಊರ್ಮಿಳೆಯನ್ನು ರಾಮನಾಗಲಿ, ಸೀತೆಯಾಗಲಿ ತಮ್ಮ ಹದಿನಾಲ್ಕು ವರ್ಷ ವನವಾಸದ ಸಂದರ್ಭದಲ್ಲಿ ಒಮ್ಮೆಯಾದರೂ ಸ್ಮರಿಸಲಿಲ್ಲವೆಂದಾದರೇ ಅದು ಪುರಾಣ ಶ್ರೇಷ್ಠರಾದ ರಾಮ ಸೀತೆಯರ ವ್ಯಕ್ತಿತ್ವಕ್ಕೆ ದೋಷವನ್ನು ಎರಚಿದಂತಾಗುತ್ತದೆ ಎಂಬ ಕಾರಣಕ್ಕೆ ದರ್ಶನ ಕವಿ ಪುನಃ ಪುನಃ ಸೂಚ್ಯವಾಗಿ ಸೀತಾರಾಮರು ಆಕೆಯನ್ನು ಸ್ಮರಿಸುವಂಥ ಸಂದರ್ಭವನ್ನು ಚಿತ್ರಿಸುತ್ತಾರೆ. ಇದರೊಂದಿಗೆ ಆಯಾ ಪಾತ್ರಗಳ ವ್ಯಾಪ್ತಿ ವಿಸ್ತರಿಸುವುದಲ್ಲದೆ, ಅವರ

ಬದುಕಿನಲ್ಲಿ ಊರ್ಮಿಳೆ ವಹಿಸಿದ ಮಹತ್ತರ ಪಾತ್ರವೆಂಥದೆಂಬುದನ್ನು ಈ ಮೂಲಕ ನಿರೂಪಿಸಿದ್ದಾರೆ.

ಮುಂದುವರೆದು ಶ್ರೀರಾಮಾಯಣದರ್ಶನಂ ಮಹಾಕಾವ್ಯದಲ್ಲಿ ದಾಖಲುಗೊಂಡಿರುವ ಊರ್ಮಿಳೆಯ ಗುಣ ಸ್ವಭಾವಗಳನ್ನು ಚರ್ಚಿಸುವುದಾದರೆ, ರಾಮಾಯಣದ ಮಹಾಸಂಗ್ರಾಮ ಪ್ರಾರಂಭವಾಗುವ ಹಿಂದಿನ ದಿನ ರಾತ್ರಿಯಲ್ಲಿ ಆಕಾಶ ಮಾರ್ಗವಾಗಿ ಸಾಗುತ್ತಿದ್ದ ತಪೋಲಕ್ಷ್ಮಿ, ನಭೋ ಲಕ್ಷ್ಮಿಯರ ಸಂಭಾಷಣೆಯಲ್ಲಿ ಊರ್ಮಿಳಾ ದೇವಿಯು ಪಾವಿದ್ರತ್ಯದ ಪರಮ ಗುಣಗಾನವಾಗುತ್ತದೆ.

"ಅಯೋಧ್ಯಾ ಪ್ರದಕ್ಷಣಂಗೆಯ್ದೆನ್,
ಚಿತ್ರಕೂಟಾದ್ರಿಯಂ, ದಂಡಕಾರಣ್ಯಮಂ,
ಪಂಚವಟಿಯಂ ಮತ್ತೆ ಕಿಷ್ಕಿಂಧೆಯಂ ಸುತ್ತಿ
ಬಂದೆನಿತ್ತಣ್ಣೆ, ಮೇಣ್ ಊರ್ಮಿಳಾ ಪ್ರಾಣಂಗೆ
ತಾಯ್ವರಕೆಯಂ, ತಮ್ಮನರಕೆಯಂ, ಮೇಣ್ ಸತಿಯ
ಮೇರುಕಂಪನಕಾರಿ ಸುವ್ರತದ ಋತಶಕ್ತಿಯಂ
ಪೊತ್ತುಪೋದಪೆನಕ್ಕ ರಕ್ಕಸರ ಕೊಂದಕ್ಕನಂ
ಪೊರೆದು ಬೇಗನೆ ಮನೆಗೆ ಬಪ್ಪ ಶುಭಮಪ್ಪವೋಲ್"[೩]

ಇಲ್ಲಿ ಮುಖ್ಯವಾಗಿ ಶ್ರೀರಾಮನ ವಿಜಯಕ್ಕೆ ಸೀತೆಯ ವಿಮೋಚನೆಗೆ ರಾಮ ಲಕ್ಷ್ಮಣರ ವೀರಾವೇಶದ ಸೀತೆಯ ತಪೋಶಕ್ತಿಯು ಜೊತೆಗೆ ಊರ್ಮಿಳೆಯ ಗೋಚರಾತೀತ ಶಕ್ತಿಯು ಸಹಾಯ ಮಾಡಿತ್ತೆಂಬುದನ್ನು ಮರೆಮಾಚುವಂತಿಲ್ಲ. ಇಂಥ ಬಹಳಷ್ಟು ಸಂಕ್ಷಿಪ್ತವಾದ ಸಂದರ್ಭಗಳನ್ನು ಸೃಷ್ಟಿಸುವುದರೊಂದಿಗೆ ಕುವೆಂಪುರವರು ಸಹೃದಯರಲ್ಲಿ ಊರ್ಮಿಳೆಯ ಘನ ವ್ಯಕ್ತಿತ್ವದ ಬೇರುಗಳನ್ನು ಶಾಶ್ವತವಾಗಿ ಪ್ರತಿಷ್ಠಾಪಿಸುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ.

ಇನ್ನೂ ಶ್ರೀರಾಮಾಯಣದರ್ಶನಂ ಮಹಾಕಾವ್ಯದ ಉದ್ದಕ್ಕೂ ಅಜ್ಞಾತವಾಗಿದ್ದ ಊರ್ಮಿಳೆಯ ವ್ಯಕ್ತಿತ್ವ ಮೆರುಗು ಪಡೆದು ಆದರ್ಶದ ಚರಮ ಸೀತೆಯನ್ನು ತಪುಪುವುದು ಕಾವ್ಯದ ಅಂತಿಮ ಭಾಗದಲ್ಲಿ ರಾವಣನನ್ನು ಜಯಿಸಿದ ನಂತರ ಶ್ರೀರಾಮ ಸೀತಾ ಲಕ್ಷ್ಮಣರ ಸಮೇತನಾಗಿ ಅಯೋಧ್ಯೆಗೆ ಮರಳುತ್ತಿರುವ ಸುದ್ದಿಯನ್ನು ಮಾಂಡವಿ ಸಂಭ್ರಮಾನಂದಗಳಿಂದ ಊರ್ಮಿಳೆಗೆ ಮುಟ್ಟಿಸುತ್ತಾಳೆ.

"ಮೀಯದುಡದೆಯೆತೊಡದೆಪೋಪುದೇನವರೆಡೆಗೆ,
ತಂಗೆ, ಕಂಗಳಮಲ್ತು!
ನೋಡಬಾರದೆ ಅವರ್
ನಿನ್ನ ನಿಡು ಕುಡುನೋಂಪಿಯಂ?
ಪನಿಗೇಂ ಪ್ರದರ್ಶನಂ? ತಪಕ್ಕಿದರ್
ನಮ್ಮದೊರ್ ತೃಣಮಲ್ತೆ! ಸಂತೋಷ ಸಮಯದೊಳ್
ತೋರ್ಪುದನುಚಿತವೆಮ್ಮ ಕಷ್ಟಮಂ! ತನ್ನ ತಾನ್
ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ
ಮೇಣ್ ತಪಕೆ ಕೇಳ್ ತಂಗೆ,ಪರಮ ಪ್ರಯೋಜನಂ"[೪]

ಎಂದು ಊರ್ಮಿಳೆ ಉತ್ತರಿಸುತ್ತಾಳೆ. ಈ ಪದ್ಯದಲ್ಲಿಯ ಒಂದೊಂದು ಸೊಲ್ಲು ಕೂಡ ಊರ್ಮಿಳೆಯ ಸಾಧನೆಗೆ ಪ್ರತೀಕವಾಗಿವೆ. ಮಹೋನ್ನತ ಗುರಿಸಾಧನೆಯ ಕಾರಣದಿಂದ ಹದಿನಾಲ್ಕು ವರ್ಷಗಳ ವನವಾಸವನ್ನು ಅನುಭವಿಸಿದ ರಾಮ, ಸೀತೆ, ಲಕ್ಷ್ಮಣರ ವ್ಯಕ್ತಿತ್ವದ ಮುಂದೆ ತಾನೊಂದು ಹನಿ ಎಂದು ಭಾವಿಸುವ, ಸಂತಸ – ಸಂಭ್ರಮಗಳ ಸಂದರ್ಭದಲ್ಲಿ ಕಷ್ಟದ ಪ್ರದರ್ಶನ ಅನುಚಿತವೆಂದು ಆಲೋಚಿಸುವ, ಸಮಗ್ರ ಸಾಧನೆಯ ಪರಮ ಗುರಿಯೆಂದರೆ ಎಲ್ಲ ಕಡೆಗಳಲ್ಲೂ ತನ್ನನ್ನು ಮೆರೆಸಿಕೊಳ್ಳುವುದಕ್ಕಿಂತ ಇಲ್ಲವಾಗಿಸಿಕೊಳ್ಳುವುದು ಎಂಬ ಆಧ್ಯಾತ್ಮಿಕ ನಿಲುವಿಗೆ ಬದ್ಧವಾಗುವ ಕುವೆಂಪುರವರ ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿಯೂ ಊರ್ಮಿಳೆಯ ವ್ಯಕ್ತಿತ್ವ ಅತ್ಯಂತ ಅಪೂರ್ವವಾದದ್ದು. ಮೇಲಿನ ಪದ್ಯಭಾಗದಲ್ಲಿ ಉಲ್ಲೇಖಿಸಲ್ಪಟ್ಟ ಊರ್ಮಿಳೆಯ ಮಾತುಗಳಲ್ಲಿ ಸ್ನಾನಾದಿಗಳನ್ನು ತೀರಿಸಿ, ಪತಿದೇವನನ್ನು ಸ್ಮರಿಸಿ ಸಿಂಗರಿಸಿಕೊಂಡು ತನ್ನ ಸುತ್ತಣ ಪ್ರಕೃತಿಗೆ, ದೇವಾದಿದೇವತೆಗಳಿಗೆ ನಮಸ್ಕರಿಸಿ ಅರಮನೆಗೆ ತೆರಳಿದಾಗ ಸುಮಿತ್ರಾದೇವಿ ಆಕೆಯನ್ನು ಬಿಗಿದಪ್ಪಿಕೊಂಡು ಹೇಳುವ ಮಾತುಗಳು ಬೇರೆಯವರ ಹೃದಯದಲ್ಲಿ ಊರ್ಮಿಳೆ ಮುದ್ರಿಸಿದ್ದ ವ್ಯಕ್ತಿತ್ವದ ಸತ್ಯಚಿತ್ರಗಳಂತೆ ಕುವೆಂಪುರವರ ಮಹಾಕಾವ್ಯದಲ್ಲಿ ಕಂಡುಬರುತ್ತದೆ.

ಊರ್ಮಿಳೆಯ ಹೃದಯ ವೈಶಾಲ್ಯತೆಗೆ ಸಾಕ್ಷಿಯಾಗಿರುವ ಸಂಗತಿಯೆಂದರೆ ಸತತ ಹದಿನಾಲ್ಕು ವರ್ಷಗಳ ಕಾಲ ಅರಮನೆಯಿಂದ ಹೊರಗಿರುವ ಮೂಲಕ ಊರ್ಮಿಳೆ ತಪಸ್ಸನ್ನಾಚರಿಸಿದರೆ ಅರಮನೆಯ ಒಳಗಿದ್ದುಕೊಂಡು ಕೈಕೆ ಪಶ್ಚಾತ್ತಾಪದ ಅಗ್ನಿಯನ್ನು ದಾಟುತ್ತಿರುತ್ತಾಳೆ. ಆಗ ನಿರುಪಮ ಚಾರಿತ್ರ್ಯ ಹೊಂದಿದ ಊರ್ಮಿಳೆ ಆಕೆಯನ್ನು ಸಂತೈಸುವ

ಕೆಲಸ ಮಾಡಿದ್ದರಿಂದಲೂ ಕೂಡ ಶ್ರೀರಾಮಾಯಣದರ್ಶನಂನಲ್ಲಿ ಶ್ರೇಷ್ಠಳೆನಿಸುತ್ತಾಳೆ.

"ಅಮ್ಮ,
ನಿಮ್ಮ ದುಃಖದ ಮೇರೆಯಂ ನಾನಳೆಯಲಾರೆ;
ಚಿಕ್ಕವಳ್, ನಮಗಾಗಿ, ನಿಮ್ಮ ಮಕ್ಕಳಿಗಾಗಿ,
ಓಂಕರಿಸದೇಂಟವೇಳ್ಕಾ ಕಾಳ ಕೂಟೋಪಮದ
ಹೃತ್ತಾಪಮಂ, ತಾಯಿ ನಿನಗಲ್ಲದಿನ್ನಾರ್ಗೆ, ಪೇಳ್,
ಶಿವಾಶಿವಶ್ರೀಕಂಠಶಕ್ತಿ? ಆಶೀರ್ವದಿಸು,
ಏಳು, ಬಾರಮ್ಮ ನೇಸರ್ ಬಳಿಯ ಬಾಳ್ ತುಬಿ
ಪರಿವುದಾನಂದ ಭಾಗೀರತಿಯವೋಲ್"[೪]

ಸಮಗ್ರ ಕಾವ್ಯದಲ್ಲಿ ಎಲ್ಲಿಯೂ ಇಷ್ಟೊಂದು ಮಾತುಗಳನ್ನಾಡದ ಊರ್ಮಿಳೆ, ರಾಮಾಯಣಕ್ಕೆ ಕಾರಣಳಾದ, ಲೋಕನಿಂದನೆಗೆ ತುತ್ತಾದ ಕೈಕೆಯನ್ನು ಸಮಾಧಾನಗೊಳಿಸಲು ಆಡಿದ್ದು ಆಕೆಯ ಪರಿಶುದ್ಧ ಹೃದಯ, ಚಿತ್ತ ಶುದ್ಧಿಗೆ ಸಾಕ್ಷಿಯಾಗಿದೆ. ಕುವೆಂಪುರವರ ಶ್ರೀರಾಮಾಯಣದರ್ಶನಂನಲ್ಲಿ ಊರ್ಮಿಳೆಯು ಕೈಗೊಳ್ಳುವ ಕೊನೆಯ ಕೈಂಕರ್ಯ ಅರ್ಥಪೂರ್ಣವಾಗಿದೆ. ವನವಾಸದ ಕಾರಣದಿಂದ ಪ್ರಿಯಕರನ ತೋಳಿನಲ್ಲಿ ಕರಗುವ ಸನ್ನಿವೇಶವನ್ನು ಕವಿಗಳು ಅಪೂರ್ಣಗೊಳಿಸಿದ್ದಾರೆ. ಪರ್ಯಾಯವಾಗಿ ತನ್ನಕ್ಕಳಾದ ಸೀತೆಯ ಉಪಚಾರದಲಿ ಊರ್ಮಿಳೆಯ ತನ್ನತನ ಮೈಮರೆಯಿತೆಂದು ಇತಿಶ್ರೀ ಹಾಡುತ್ತಾರೆ. ಇಲ್ಲಿ ಊರ್ಮಿಳೆಯ ಪರಸೇವಾ ಸಮರ್ಪಿತ ಪ್ರೇಮಮಯ ವ್ಯಕ್ತಿತ್ವವನ್ನು ಗುರುತಿಸಬಹುದು.

ಬಟ್ಟಾರೆಯಾಗಿ ಶ್ರೀರಾಮಾಯಣದರ್ಶನಂ ಎಂಬ ಸುದೀರ್ಘ ಕಾವ್ಯದಲ್ಲಿ ಊರ್ಮಿಳೆ ಕಾಣಿಸಿಕೊಳ್ಳುವುದು ಕೇವಲ ಎರಡು ಬಾರಿ ಮಾತ್ರ. ಕಾವ್ಯದುದ್ದಕ್ಕೂ ಎಲ್ಲಿಯೂ ಅವಳ ನಡೆನುಡಿಯಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಆಕೆಯ ವ್ಯಕ್ತಿತ್ವದಲ್ಲಿ ಮಾತಿಗಿಂತ ಮೌನಕ್ಕೆ ಮೊದಲ ಸ್ಥಾನ ದೊರೆತಿದೆ. ಅವಳಾಡುವ ಬೆರಳೆಣಿಕೆಯ ಮಾತುಗಳು ಪ್ರಬುದ್ಧ ಚಿಂತನೆಗೆ ಕುರುಹಾಗಿವೆ. ನಿರಂತರವಾಗಿ ಹದಿನಾಲ್ಕು ವರ್ಷಗಳ ಕಾಲ ರಾಮ, ಸೀತೆ, ಲಕ್ಷ್ಮಣರಿಗೋಸ್ಕರ ಊರ್ಮಿಳೆ ಮಾಡುವ ಪ್ರತೀಕ್ಷೆ ಅಮೋಘವಾದುದು. ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಾದಂತೆ ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಊರ್ಮಿಳೆಯ ಪಾತ್ರಕ್ಕೆ ಅನಾದರಣೆಯಾಗಲಿ, ಅನ್ಯಾಯವಾಗಲಿ ಆಗಿಲ್ಲ. ಎಲ್ಲ ಸಂದರ್ಭಗಳಲ್ಲಿಯೂ ಆಕೆ "ತನ್ನನ್ನು ತಾನು ಇಲ್ಲಗೈದುಕೊಂಡು ಸಾಧನೆಯ ಕೊನೆಯ ಗುರಿಯನ್ನು ಮುಟ್ಟುತ್ತಾಳೆ. ತನ್ನನ್ನು ತಾನು ಅಲ್ಲಗೈಯುತ್ತಿರುವ ಅವಳ ಸಾಧನೆಯ ಶಕ್ತಿಯನ್ನಷ್ಟೇ ಕುವೆಂಪು ಅವರು ವ್ಯಾಪಕಗೊಳಿಸಿ ಇದನ್ನೊಂದು ಮೌನದ ಮಹಾಶಕ್ತಿಯುತ ಪಾತ್ರವಾಗಿ ಕಡೆದು ನಿಲ್ಲಿಸಿದ್ದಾರೆ." ಎಂದು ಎಚ್. ತಿಪ್ಪೇರುದ್ರಸ್ವಾಮಿಯವರು ಅಭಿಪ್ರಾಯಿಸಿರುವುದು ಸೂಕ್ತವೆನಿಸುತ್ತದೆ. ಈ ದೃಷ್ಟಿಯಿಂದಲೇ ಕನ್ನಡ ಕಾವ್ಯ ಪ್ರಪಂಚದಲ್ಲಿ ಊರ್ಮಿಳೆಯ ಪಾತ್ರವು ವಿಶಿಷ್ಟವಾಗಿ ಕಾಣಿಸುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಒಬ್ಬ ಮಹಾಕವಿಯ ಕಾವ್ಯವನ್ನು ಮತ್ತೊಬ್ಬ ಮಹಾಕವಿ ತನ್ನದಾಗಿಸಿಕೊಂಡು ಮರೆತುಹೋದ ಪಾತ್ರಕ್ಕೆ ಜೀವತುಂಬಿ ಜನಮಾನಸದಲ್ಲಿ ಉಳಿಯುವಂತೆ ನೀಡಿರುವ ವರ್ಣನೆ ಅನುಪಮ. ಸೀತೆಯೊಡನೆ ಬೆಳೆದ ಊರ್ಮಿಳೆಗೂ ಸಹ ಸತಿಧರ್ಮ ತಿಳಿದಿತ್ತು ಆದರೆ ಅವಳಿಗೇಕೆ ಅವಕಾಶ ಸಿಗಲಿಲ್ಲ? ದ್ವಿತೀಯ ನಾಯಕ ಲಕ್ಷ್ಮಣನಾದ ಮೇಲೆ ಕಾವ್ಯದಲ್ಲಿ ಗಂಡನಿಂದ ದೂರ ಉಳಿದ ತ್ಯಾಗಮಯಿಯಾದ ಊರ್ಮಿಳೆಗೆ ಎರಡನೇ ನಾಯಕಿಯ ಸ್ಥಾನದಲ್ಲಿ ತಪಸ್ವಿನಿ, ಸಾಧ್ವಿ, ಶ್ರೇಷ್ಠತೆಯನ್ನು ಕುವೆಂಪು ನೀಡಿ ತಮ್ಮ ಕಾವ್ಯಶಕ್ತಿಯನ್ನು ಇನ್ನಷ್ಟು ಉಣಬಡಿಸಿದ್ದಾರೆ.

ಕೊನೆ ಟಿಪ್ಪಣಿ


1. ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್ ಜೆ ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨, ಪುಟ:- ೪೩೮-೪೩೯
2. ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್ ಜೆ ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨, ಪುಟ:- ೪೪೨
3. ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್ ಜೆ ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨, ಪುಟ:- ೪೪೬
4. ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್ ಜೆ ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨, ಪುಟ:- ೪೪೮-೪೪೯

5. ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್ ಜೆ ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨, ಪುಟ:- ೪೪೯-೪೫೦

## ಪರಾಮರ್ಶನ ಗ್ರಂಥಗಳು


1. ಕುವೆಂಪು ಸಮಗ್ರ ಕಾವ್ಯ, ಸಂಪುಟ-೩, ಶ್ರೀರಾಮಾಯಣ ದರ್ಶನಂ ಚಿತ್ರಾಂಗದ, ಸಂ. ಡಾ.ಕೆ ಸಿ ಶಿವಾರೆಡ್ಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭.
2. ಶ್ರೀರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್ ಜೆ ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨.
3. ಶ್ರೀರಾಮಾಯಣದರ್ಶನಂ ವಚನಚಂದ್ರಿಕೆ, ದೇ.ಜವರೇಗೌಡ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, ೨೦೧೪.